**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಸುಳ್ಯ ದ.ಕ.**

**ಸಿ.ಸಿ.ಸಂ. 276/2022**

ಫಿರ್ಯಾದುದಾರರು : ಸರ್ಕಾರದ ಪರ ಸುಳ್ಯ ಪೊಲೀಸ್ ಠಾಣೆ

ಃ ವಿರುದ್ಧ ಃ

ಆರೋಪಿ : ಎಸ್ ಭಾಸ್ಕರ ,
ತಂದೆಃ ಪುರುಷೊತ್ತಮ ,
ವಾಸಃ ಮರ್ಕಂಜ ಗ್ರಾಮ ,
ಸುಳ್ಯ ತಾಲೂಕು , ದ.ಕ.

## ಃ ದೋಷಾರೋಪಣೆ ಃ

ಕುಮಾರಿ ಅರ್ಪಿತಾ ಬಿ.ಎ., ಎಲ್.ಎಲ್.ಬಿ ., ಸಿ.ಜೆ ಮತ್ತು ಜೆ.ಎಂ.ಎಫ್.ಸಿ., ಸುಳ್ಯ ಆದ ನಾನು ಮೇಲ್ಕಂಡ ಆಪಾದಿತರಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪಗಳನ್ನು ಹೊರಿಸುತ್ತಿದ್ದೇನೆ.

ಆರೋಪಿತರಾದ ನೀವು ದಿನಾಂಕ 22.04.2002 ರಿಂದ ಸುಳ್ಯ ತಾಲೂಕು ಮರ್ಕಂಜ ಗ್ರಾಮದ ಮರ್ಕಂಜ ಗ್ರಾಮಿಣ ಅಂಚೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯ ದಿನಾಂಕ 03.02.2003 ರಿಂದ 05.02.2004 ರ ಮಧ್ಯ ಮರ್ಕಂಜ ಅಂಚೆ ಕಚೇರಿಯಲ್ಲಿ ಚಾಸಾ 2 ನೇಯವರು ದಿನಾಂಕ 11.12.2003 ರಂದು ತಮ್ಮ ಎಸ್.ಬಿ. ಖಾತೆ ನಂಬ್ರ 206 2597 ಕ್ಕೆ ಕಟ್ಟಿದ ರೂಪಾಯಿ 1250 ನ್ನು ನೀವು ಅವರ ಖಾತೆಗೆ ಜಮಾ ಮಾಡದೆ ನಿಮ್ಮ ಸ್ವಂತಕ್ಕೆ ಉಪಯೋಗಿಸಿ ಹಣ ದುರುಪಯೋಗ ಮಾಡಿದ್ದು ಅಲ್ಲದೇ ದಿನಾಂಕ 5.02.2003 ರಿಂದ 4.10.2003 ರವೆರಗೆ ಚಾಸಾ 3 ನೇಯವರು ತಮ್ಮ ಎಸ್.ಬಿ. ಖಾತೆ ನಂಬ್ರ 206 3621 ಕ್ಕೆ ಕಟ್ಟಿದ ರೂಪಾಯಿ 7900 ನ್ನು ನಿಮ್ಮ ಸ್ವಂತಕ್ಕೆ ಹಣ ದುರುಪಯೋಗ ಮಾಡಿದ್ದು ಅಲ್ಲದೇ ಚಾಸಾ 4 ನೇಯವರು ತಮ್ಮ ಆರ್.ಡಿ ಖಾತೆ ನಂಬ್ರ 1045432

ಕ್ಕೆ ಕಟ್ಟಿದ ನಗದು ರೂಪಾಯಿ 5000 ನ್ನು ಸ್ವಂತಕ್ಕೆ ಉಪಯೋಗಿಸಿಕೊಂಡು ಹಣ ದುರುಪಯೋಗ ಮಾಡಿದ್ದು ಒಟ್ಟು ಚಾಸಾ 2 ರಿಂದ 4 ನೇಯವರು ಬಾಬ್ತು ಅಂಚೆ ಇಲಾಖೆಗೆ ಕಟ್ಟಿದ ನಗದು ಹಣ ರುಾಪಾಯಿ 14,150 ನ್ನು ಸ್ವಂತಕ್ಕೆ ಉಪಯೋಗಿಸಿಕೊಂಡು ಅಂಚೆ ಇಲಾಖೆಗೆ ಮೋಸ ಹಾಗೂ ವಂಚನೆ ಎಸಗಿದ್ದು ಅಲ್ಲದೇ ಚಾಸಾ 2 ರಿಂದ 4 ನೇರವರ ಹಣವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡು ನಂಬಿಕೆ ದ್ರೋಹಮಾಡಿರುವುದಾಗಿದ್ದು. ಈ ಮೂಲಕ ಭಾ.ದಂ.ಸಂ.ಕಲಂ 409 ಮತ್ತು 420 ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯಲ್ಲಿ ಮಾಡಿರುವಿರಿ?

ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.

ಸ್ಥಳ ಃ ಸುಳ್ಯ.

ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಸುಳ್ಯ.

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಸುಳ್ಯ ದ.ಕ.**

**ಸಿ.ಸಿ.ಸಂ. 276/2022**

ಫಿರ್ಯಾದುದಾರರು : ಸರ್ಕಾರದ ಪರ ಸುಳ್ಯ ಪೊಲೀಸ್ ಠಾಣೆ

:: ವಿರುದ್ಧ ::

ಆರೋಪಿ : ಎಸ್ ಭಾಸ್ಕರ

-------

ಪ್ರ. 1 : ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ :

ಪ್ರ. 2 : ನೀವು ಸದರಿ ಆಪಾದನೆಯನ್ನು ಒಪ್ಪಿಕೊಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ?

ಉತ್ತರ :

ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.

ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.
ಸುಳ್ಯ